**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/46/ಚುನಾವಣೆ/ಅಸೂ/2013-14

3 ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು,
ದಿನಾಂಕ:- 28-5-2014

## -: ತಿದ್ದುಪಡಿ :-

ವಿಷಯ:- ದಿನಾಂಕ:31.03.2014ಕ್ಕೆ ಅವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳು, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವಿಕೆ – ಪರಿಷ್ಕೃತ ಅಧಿಸೂಚನೆಗೆ ತಿದ್ದುಪಡಿ ಮಾಡುವ ಕುರಿತು

ಉಲ್ಲೇಖ:- 1. ಆಯೋಗದ ಅಧಿಸೂಚನೆ :ಸಚುಆ/46/ಚುನಾವಣೆ/ ಅಸೂ/ 2013-14 2013-14 ದಿನಾಂ:20-5-2014
2. ಅಪೆಕ್ಸ್ ಸಂಘಗಳಿಂದ ಬಂದ ಮಾಹಿತಿ

*****

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಗೌರವ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ:734/2014 ಹಾಗೂ ಇನ್ನಿತರ ಸಂಬಂಧಿತ ರಿಟ್ ಅಪೀಲುಗಳಲ್ಲಿ ದಿನಾಂಕ:30-4-2014 ರಂದು ನೀಡಿದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಚುನಾವಣಾ ಆಯೋಗವು ಕೆಲವು ಅಪೆಕ್ಸ್ ಸಂಘಗಳ ಮಂಡಲಿ ಚುನಾವಣೆ ಸಂಬಂಧ ಹೊಸದಾಗಿ ಚುನಾವಣೆ ದಿನಾಂಕಗಳನ್ನು ನಿಗದಿಪಡಿಸಿ, ಉಲ್ಲೇಖ (1) ರಲ್ಲಿ ಕಾಣಿಸಿರುವಂತೆ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಅಪೆಕ್ಸ್ ಸಂಘಗಳ ಹಾಲಿ ಮಂಡಲಿಗೆ ಅವಧಿ ಮುಗಿಯುವ ದಿನಾಂಕ ಸಂಬಂಧ ಅಪೆಕ್ಸ್ ಸಂಘಗಳಿಂದ ಬಂದಿರುವ ಮಾಹಿತಿಯನ್ನು ಅವಲೋಕಿಸಿದಾಗ ಹಾಲಿ ಇರುವ ಮಂಡಲಿಯ ಚುನಾವಣೆ ನಡೆದ ದಿನಾಂಕಗಳಲ್ಲಿ ಸ್ವಲ್ಪ ಬದಲಾವಣೆ ಆಗಿರುವ ಹಿನ್ನೆಲೆಯಲ್ಲಿ ಉಲ್ಲೇಖ (1) ರ ಆಯೋಗದ ಅಧಿಸೂಚನೆಯನ್ನು ಈ ಕೆಳಕಂಡ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಗಣನೆಗೆ ತೆಗೆದುಕೊಳ್ಳುವಂತೆ ನಿರ್ದೇಶಿಸಿದೆ.

ಉಲ್ಲೇಖ (1) ರ ಅಧಿಸೂಚನೆಯ ಪುಟ 3 ರಲ್ಲಿನ ಮೂರನೇ ಅಂಕಣದಲ್ಲಿನ ಟೇಬಲ್‌ನಲ್ಲಿ ಹಾಲಿ ಮಂಡಲಿ ಅವಧಿ ಮುಗಿಯುವ ದಿನಾಂಕಗಳಿಗೆ ಬದಲಾಗಿ "ಹಾಲಿ ಆಡಳಿತ ಮಂಡಲಿಗೆ ಚುನಾವಣೆ ನಡೆದ ದಿನಾಂಕ" ಎಂದು ಈ ಕೆಳಕಂಡಂತೆ ತಿದ್ದುಪಡಿ ಮಾಡಿದ್ದು, ಅದರಂತೆ ಅಧಿಸೂಚನೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

| ಕ್ರಸಂ | ಸಹಕಾರ ಸಂಘಗಳ ವರ್ಗ | ಹಾಲಿ ಆಡಳಿತ ಮಂಡಲಿಗೆ ಚುನಾವಣೆ ನಡೆದ ದಿನಾಂಕ | ಚುನಾವಣೆ ನಡೆಸಲು ಗೊತ್ತುಪಡಿಸಿದ ಪರಷ್ಕರಿಸಿದ ದಿನಾಂಕ |
|---|---|---|---|
| 1 | ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು. | 6-7-2009 | ಉಲ್ಲೇಖ (1) ರ ಅಧಿಸೂಚನೆಯಲ್ಲಿ ಗೊತ್ತುಪಡಿಸಿರುವಂತೆ ಕ್ರಮವಿಡತಕ್ಕದ್ದು. |
| 2 | ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಲ ನಿ., ಬೆಂಗಳೂರು. | 20-7-2009 | |
| 3 | ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಮಹಾಮಂಡಲ ನಿ., ಬೆಂಗಳೂರು. | 01-07-2009 | |
| 4 | ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಮಹಾಮಂಡಲ ನಿ. ಬೆಂಗಳೂರು | 19-7-2009 | |
| 5 | ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಲ ನಿ., ಬೆಂಗಳೂರು (ಕಾವೇರಿ ಹ್ಯಾಂಡ್‌ಲೂಮ್ಸ್) | ಆಡಳಿತಗಾರರು ಕಾರ್ಯನಿರ್ವಹಿಸುತ್ತಿದ್ದಾರೆ | |

---2

ಮೇಲೆ ಸೂಚಿಸಲಾದ ತಿದ್ದುಪಡಿಗಳನ್ನು ಉಲ್ಲೇಖ (1) ರ ಅಧಿಸೂಚನೆಯ ಪುಟ 3 ರ ಅಂಕಣದ ಟೇಬಲ್‌ನಲ್ಲಿ ಅಳವಡಿಸಿಕೊಂಡು ಅಧಿಸೂಚನೆಯನ್ನು ಸೂಚಿತ ತಿದ್ದುಪಡಿಯೊಡನೆ ಗಣನೆಗೆ ತೆಗೆದುಕೊಳ್ಳುವಂತೆ ಸೂಚಿಸಿದೆ. ಉಳಿದಂತೆ ಉಲ್ಲೇಖ (1)ರ ಅಧಿಸೂಚನೆಯಲ್ಲಿ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆಗಳಿರುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಇವರಿಗೆ:-

1. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560052.
3. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು ವಿಭಾಗ, ಬೆಂಗಳೂರು/ಮೈಸೂರು
4. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರಿಗೆ
5. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಜಂಟಿ ನಿಬಂಧಕರಿಗೆ
6. ಸಹಕಾರ ಸಂಘಗಳ ಜಂಟಿ ನಿಬಂಧಕರು, ------------ಪ್ರಾಂತ್ಯ--------------
7. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು
8. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೆ,
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಲ ರೇಸ್‌ಕೋರ್ಸ್ ರಸ್ತೆ, ಬೆಂಗಳೂರು
10. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನೂಲಿನ ಗಿರಣಿಗಳ ಮಹಾಮಂಡಲ ನಿ., ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಮಹಾಮಂಡಳ ನಿ., ಬೆಂಗಳೂರು
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಳ ನಿ., ಬೆಂಗಳೂರು
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು
14. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಲ ನಿ., ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಹಕಾರ ಮಹಾಮಂಡಲ ನಿ. ಬೆಂಗಳೂರು
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಲ ನಿ., ಬೆಂಗಳೂರು (ಕಾವೇರಿ ಹ್ಯಾಂಡ್‌ಲೂಮ್ಸ್)
17. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳ ನಿ., ಮೈಸೂರು
18. ರಕ್ಷಾ ಕಡತ / ಕಛೇರಿ ಪ್ರತಿ.